“ಎರಡು ಪೆಗ್ ಹಾಕಿದರೆ ಒಳ್ಳೆಯದು. ಯಾಕೆಂದರೆ ರೆಗ್ಯುಲರ್ ಮಿನಿಮಮ್ ಆಲ್ಕೋಹಾಲ್ ಇನ್ ಟೇಕ್ ಕಾರ್ಡಿಯಾಕ್ ಅಟ್ಯಾಕ್ ಅನ್ನು ಪೋಸ್ಟ್ ಪೋನ್ ಮಾಡುತ್ತದೆಯಲ್ಲದೆ ಪ್ರಿವೆಂಟ್ ಕೂಡ ಮಾಡುತ್ತದೆ ಅಂತ ರೀಸೆಂಟ್ ರೀಸರ್ಚ್‌ಗಳು ಹೇಳುತ್ತವೆ. ಆದರೆ ಇದನ್ನು ಡಾಕ್ಟರ್‌ಗಳು ಅಡ್ವೈಸ್ ಮಾಡಿದ್ರೆ ಅದು ಬೇರೊಂದು ರೂಟ್ ಹಿಡಿಯುತ್ತೆ. ಆದ್ದರಿಂದಲೇ ನಾವು ಡಾಕ್ಟರ್‌ಗಳು ಸ್ಮೋಕಿಂಗ್ ಅಂಡ್ ಡ್ರಿಂಕಿಂಗ್ ಆರ್ ಬೋತ್ ಡೇಂಜರಸ್ ಟು ಹೆಲ್ತ್ ಎಂದೇ ಹೇಳುತ್ತೇವೆ. ಆದರೆ ಜೀವಜಗತ್ತಿಗೆ ವಿನಾಶಕಾರಿ ಸಂಗತಿಗಳ ಬಗ್ಗೆಯೇ ಹೆಚ್ಚು ಆಸಕ್ತಿ” ಎಂದಿದ್ದರು.

“ಯಾಕೋ ಗಾಂಧಿ ಮೈ ಹುಷಾರಿಲ್ವಾ...” ಪರಿಚಿತ ಧ್ವನಿ ವಿಚಾರಿಸಿಕೊಂಡಂತೆ ಭಾಸವಾಗಿ, ಎದ್ದು ಲೈಟ್ ಹಾಕಿ ಒಮ್ಮೆ ರೂಮನ್ನೆಲ್ಲಾ ಅವಲೋಕಿಸಿ ಏನೂ ಗೋಚರಿಸದೆ ಹಾಸಿಗೆಯ ಮೇಲೆ ಉರುಳಿಕೊಂಡಿದ್ದೆ. ಅದು ನನ್ನ ಅಮ್ಮನ ಧ್ವನಿಯನ್ನು ಹೋಲುತ್ತಿತ್ತು. ಮತ್ತೆ ಕೇಳಿಸಬಹುದೇನೋ ಎಂದು ಕಿವಿ ಅಗಲಿಸಿದ್ದೆ. ಆದರೆ ಮತ್ತೆ ಕೇಳಿಸಲಿಲ್ಲ. ಅಮ್ಮ ನಾನು ಡಿಗ್ರಿಯಲ್ಲಿ ಓದುತ್ತಿರುವಾಗಲೇ ಕ್ಯಾನ್ಸರ್ ಕಾಯಿಲೆಗೆ ಬಲಿಯಾಗಿದ್ದಳು. ಅಪ್ಪ ಬೇರೊಂದು ಮದುವೆಯಾದರೂ ನನ್ನ ಬಗ್ಗೆ ಅಸಡ್ಡೆ ತೋರಿಸದೆ ಚೆನ್ನಾಗಿ ಸಾಕಿ ಸಲಹಿದ್ದಲ್ಲದೆ ಓದುವಷ್ಟೂ ಓದಿಸಿದ್ದ. ಆದ್ದರಿಂದಲೇ ಇವೊತ್ತಿನ ದಿನ ನಾನು ರೆವಿನ್ಯೂ ಇಲಾಖೆಯಲ್ಲಿ ಡೆಪ್ಯುಟಿ ಸೆಕ್ರೇಟರಿಯಾಗಿ ಕೆಲಸ ಮಾಡುತ್ತಿದ್ದೇನೆ. ವಯಸ್ಸು ಐವತ್ತೆರಡು. ಹೆಸರು ಗಾಂಧಿ. ನನಗೆ ಗಾಂಧಿ ಎಂದು ಹೆಸರಿಟ್ಟ ಗಾಂಧಿವಾದಿ ತಾತ ನಾನು ಒಂದು ವರ್ಷವನಿದ್ದಾಗಲೇ ಸತ್ತು ಹೋದರಂತೆ. ಹೆಸರು ಕರೆಯಲು ಸುಲಭವಿದ್ದಿದ್ದರಿಂದ ಅಪ್ಪ ಅಮ್ಮ ಅಷ್ಟಾಗಿ ತಲೆ ಕೆಡಿಸಿಕೊಂಡಿರಲಿಲ್ಲ. ನಾನಂತೂ ಬಾಲ್ಯದಿಂದ ಇಂದಿನವರೆಗೂ ಒಬ್ಬ ಸಾಮಾನ್ಯನಂತೆ ಬದುಕಿದ್ದೇನೆ. ಸಮಯಕ್ಕೆ ತಕ್ಕಂತೆ ಆಗಾಗ ಸುಳ್ಳು ಹೇಳುತ್ತೇನೆ. ಸಂದರ್ಭಕ್ಕನುಗುಣವಾಗಿ ಲಂಚ ಪಡೆಯುತ್ತೇನೆ. ಹೆಚ್ಚಲ್ಲದಿದ್ದರೂ ರೆಗ್ಯುಲರ್ ಆಗಿ ಸಿಗರೇಟು ಉರಿಸುತ್ತೇನೆ. ಬೇಕೆನಿಸಿದಾಗ ಮಾಂಸಾಹಾರವನ್ನು ಪ್ರೀತಿಯಿಂದಲೇ ತಿನ್ನುತ್ತೇನೆ. ಅಪರೂಪಕ್ಕೆ ಸ್ನೇಹಿತರು ಸಿಕ್ಕಿದರೆ ಒಂದು ದಿನ ಪೂರ್ತಿ ಇಸ್ಪೀಟು ಆಡುತ್ತೇನೆ. ಹಾಗಾಗಿ ಆತ್ಮೀಯ ಸ್ನೇಹಿತರು ಮತ್ತು ಹತ್ತಿರದ ಬಂಧುಗಳು, “ನಿಂಗ್ಯಾಕ್ ಗಾಂಧಿ ಅಂತ ಹೆಸರಿಟ್ನೊ ನಿಮ್ ತಾತ. ಗಾಂಧಿಲಿದ್ದ ಗುಣಗಳಲ್ಲಿ ಹತ್ತು ಪರ್ಸೆಂಟ್ ಆದ್ರೂ ಇಲ್ವಲ್ಲೊ...” ಎಂದು ಗೇಲಿ ಮಾಡುತ್ತಾರೆ. ಆದರೆ ಯಾರ ಮಾತಿಗೂ ನಾನು ತಲೆ ಕೆಡಿಸಿಕೊಳ್ಳುವುದಿಲ್ಲ. ನನಗೆ ಗೊತ್ತು, ಮನುಷ್ಯನ ಗುರುತಿಗೆ ಹೆಸರೊಂದು ಅನಿವಾರ್ಯವೆಂದು. ಆದರೆ ಹೆಸರಿಗೂ ಮನುಷ್ಯನ ವರ್ತನೆಗಳಿಗೂ ಯಾವುದೇ ರೀತಿಯ ಸಂಬಂಧವಿರುವುದಿಲ್ಲವೆಂಬುದು ಸತ್ಯವೇ. ಬಹುತೇಕ ಜನರಿಗೆ ದೇವರ ಹೆಸರುಗಳೇ ಇರುತ್ತವೆ. ಅಂದಮಾತ್ರಕ್ಕೆ ಅವರೆಲ್ಲ ಆಯಾ ದೇವರುಗಳಂತೆ ವರ್ತಿಸಲು ಸಾಧ್ಯವೆ?

ನಿದ್ದೆ ಆವರಿಸುತ್ತಿಲ್ಲ. ಹೆಂಡತಿ ಎರಡು ದಿನಗಳ ಹಿಂದೆ ಮೆನ್ಸಸ್ ಆಗಿದ್ದರಿಂದ ಪಕ್ಕದ ರೂಮಿನಲ್ಲಿ ಮಲಗಿದ್ದಾಳೆ. ಒಬ್ಬನೇ ಮಗ ಚೆನ್ನೈನ ಐಐಟಿಯಲ್ಲಿ ನಾಲ್ಕನೇ ಸೆಮಿಸ್ಟರ್‌ನಲ್ಲಿ ಕಲಿಯುತ್ತಿದ್ದಾನೆ. ಈಗ ತಾನೇ ಬಿದ್ದ ಕನಸಿನ ಜಾಡು ಹಿಡಿಯಲು ಯತ್ನಿಸಿ ಸೋತಿದ್ದೆ. ಕನಸುಗಳಿಗೆ ನಿರ್ದಿಷ್ಟವಾದ ಅರ್ಥವಾಗಲೀ, ವ್ಯಾಖ್ಯೆಯಾಗಲೀ ಇಲ್ಲವೆಂದು ಸೈಕಾಲಜಿಸ್ಟ್‌ಗಳು, ಡಾಕ್ಟರ್‌ಗಳು ಹೇಳಿದ್ದನ್ನು ಪತ್ರಿಕೆಗಳಲ್ಲಿ ಅನೇಕ ಬಾರಿ ಓದಿದ್ದರೂ ಕನಸುಗಳ ಬಗ್ಗೆ ನನ್ನಲ್ಲಿ ಕುತೂಹಲ, ಅಚ್ಚರಿಗಳು ಹಾಗೆಯೇ ಉಳಿದುಕೊಂಡಿರುವುದೇ ಇಂದಿನ ತಳಮಳಕ್ಕೆ ಕಾರಣವಾಗಿರಬಹುದು. ದೇಹದಲ್ಲಿ ಏನೋ ಹೊಕ್ಕಂತೆ ಮತ್ತೆ ಹೊರಗೆ ಹೋದಂತೆ; ಮನಸ್ಸಿನಲ್ಲಿ ಏನೋ ಅದ್ದಿ ತೆಗೆದಂತೆ. ಒಂದು ರೀತಿಯ ಹಿತವಾದ ಸಂಕಟ. ಕಡೆಗೆ ಗದ್ದೆಯಲ್ಲಿನ ಕಪ್ಪೆಗಳ ವಟಗುಟ್ಟುವಿಕೆ ಒಮ್ಮೆಲೇ